ಸಂಪುಟ : 42 | ಸಂಚಿಕೆ : 1–3 | ಬೆಲೆ : 50/– | ಒಟ್ಟು ಪುಟಗಳು:164 | ದಿನಾಂಕ: 30–08–2015

## ಪರಿವಿಡಿ


| | | |
|---|---|---|
| ಸರ್ವಾಧಿಕಾರ ಪ್ರಭುತ್ವದ ಅಪಾಯ ಎದುರಿಸಲು ಎಡ ಪ್ರಗತಿಪರ ಶಕ್ತಿಗಳ ಪರ್ಯಾಯ... | ಶಿವರಾಜ ರಾ. ಬಿರಾದಾರ | 6 |
| ಕೃಷಿ ಬಿಕ್ಕಟ್ಟು ರೈತರ ಆತ್ಮಹತ್ಯೆ ಆಕಸ್ಮಿಕವಲ್ಲ : ವ್ಯವಸ್ಥಿತ ಪಿತೂರಿ | ಪಿ.ವಿ.ಲೋಕೇಶ್ | 9 |
| ಕಮ್ಯುನಿಸ್ಟರು ಒಂದಾಗಿ ಮುಂದಾಗಬೇಕು | ಡಾ॥ ಸಿದ್ದನಗೌಡ ಪಾಟೀಲ | 15 |
| ಬರಲಿರುವ ಕರಾಳ ದಿನಗಳ ಹಿಮ್ಮೆಟ್ಟಿಸೋಣ | ಜ್ಯೋತಿ ಎ | 23 |
| ತುರ್ತಾಗಿ ಬೇಕಿದೆ : ಪ್ರಗತಿಪರ, ಪ್ರಜಾಸತ್ತಾತ್ಮಕ, ಜಾತ್ಯತೀತ ಶಕ್ತಿಗಳ... | ಜಿ. ರಾಜಶೇಖರ | 31 |
| ಸ್ವಾತಂತ್ರ್ಯ ಮತ್ತು ಕ್ಷೇಮ ಎರಡೂ ಜೊತೆ | ಡಾ॥ ಜಿ.ರಾಮಕೃಷ್ಣ | 41 |
| ಅಮೇರಿಕದಲ್ಲಿ ಹಾರಿದ ಕ್ಯೂಬ ಬಾವುಟ | ಮುರಳೀಧರ್ | 53 |
| ದೇಶದ ವಾಸ್ತವಿಕ ಪರಿಸ್ಥಿತಿ ಮತ್ತು ಸಮಾಜವಾದ | ಸುಗಲಾ ಮಾಲಗಾರ & ಡಾ.ಪ್ರಕಾಶ ದೇಸಾಯಿ | 59 |
| ಯಾರಿಗೆ ಬಂದು ಎಲ್ಲಿಗೆ ಹೋಯ್ತು ನಲವತ್ತೇಳರ ಸ್ವಾತಂತ್ರ್ಯ ? | ಅಯ್ಯಪ್ಪ ಹೂಗಾರ | 67 |
| ಯೋಜನಾ ಆಯೋಗದಿಂದ ನೀತಿ (NITI) ಆಯೋಗದವರೆಗೆ | ಎಸ್.ಸುರೇಂದ್ರ | 73 |
| ಉದ್ಯೋಗ, ಅಭಿವೃದ್ಧಿ ಮತ್ತು ಮಾರ್ಕ್ಸ್‌ವಾದಿ ಪ್ರಜ್ಞೆ: ಒಂದು ಚಿಂತನೆ | ಸಿ.ವಿ.ಪಾಟೀಲ | 81 |
| ಭಾರತದ ಆರ್ಥಿಕರಂಗಕ್ಕೆ ಚಾಲನಶಕ್ತಿ ನೀಡಿದ... | ಮ.ಶ್ರೀ. ಮುರಳಿಕೃಷ್ಣ | 89 |
| ಕರ್ನಾಟಕದ ಮಹಿಳಾ ಚಳುವಳಿಗಳು ಮತ್ತು ಸ್ತ್ರೀವಾದ | ಡಾ॥ ಕೆ.ಷರೀಫಾ | 97 |
| ಸಾಮ್ರಾಜ್ಯಶಾಹಿ ವಿರುದ್ಧ ನಿರಂತರ ಹೋರಾಟ ಅನಿವಾರ್ಯ | ಸಿ.ಆರ್. ಕೃಷ್ಣರಾವ್ | 101 |
| ಅಮೂಲಾಗ್ರ ಬದಲಾವಣೆಗಾಗಿ ಸ್ವತಂತ್ರ ಆಂದೋಲನವೊಂದೇ ಮಾರ್ಗ | ಪ್ರೊ॥ ಸಂಪಿಗೆ ತೋಂಟದಾರ್ಯ | 107 |
| ರೈತರ ಆತ್ಮಹತ್ಯೆ ಮತ್ತು ಕನ್ನಡ ರಂಗಭೂಮಿ | ಶಶಿಕಾಂತ ಯಡಹಳ್ಳಿ | 111 |
| ಮಹಿಪಿ ವರದಿಯ ಸುತ್ತಮುತ್ತ | ಡಾ॥ ಕಾ.ವೆಂ.ಶ್ರೀನಿವಾಸಮೂರ್ತಿ | 117 |
| ಇದು ಕೆಂಪು ವರ್ಸಸ್ ನೀಲಿ ಅಲ್ಲ | ಡಾ॥ ಎಚ್.ಎಸ್.ಅನುಪಮಾ | 121 |
| ಆಧುನಿಕ ಸಂವಹನ ಮಾಧ್ಯಮಗಳ ಸಂದರ್ಭದಲ್ಲಿ ರಂಗಭೂಮಿ | ಎಸ್. ಮಾಲತಿ | 125 |
| ಅಸ್ಪೃಶ್ಯತೆ ಮತ್ತು ಬಸವಣ್ಣ | ಪಿ.ಷಣ್ಮುಖಸ್ವಾಮಿ | 127 |
| ವನ್ಯನೀತಿ ಜಾರಿಗೆ ಬರಲಿ | ಕೆ.ಎಸ್. ನವೀನ್ | 133 |
| ಪೋಪ್ ಫ್ರಾನ್ಸಿಸರು ಸಮಾಜವಾದಿಗಳೇ? | ಹೆಚ್.ವಿ.ರಾವ್ | 137 |
| ಸಿದ್ರಾಮಣ್ಣೋರಿಗೆ ಒಂದು ಮನವಿ! | ಬೀರಣ್ಣ | 145 |
| ಜೀವ (ಕಥೆ) | ರವಿ ಅಜ್ಜಿಪುರ | 151 |
| ಕವನಗಳು | 13, 21, 39, 51, 71, 87, 93, 143, 162 | |

# ದೇಶದ ವಾಸ್ತವಿಕ ಪರಿಸ್ಥಿತಿ ಮತ್ತು ಸಮಾಜವಾದ



ಸುಗಲಾ ಮಾಲಗಾರ



ಡಾ॥ ಪ್ರಕಾಶ ದೇಸಾಯಿ

**ದೇ**ಶದ ವಾಸ್ತವಿಕ ಪರಿಸ್ಥಿತಿಯನ್ನು ಸಮಾಜವಾದದ ದೃಷ್ಟಿಕೋನದಿಂದ ವಿವರಿಸುವದು ಕೇವಲ ಸೈದ್ಧಾಂತಿಕ ವಿಷಯವಾಗಿರದೆ ಪ್ರಾಯೋಗಿಕ ಅನಿವಾರ್ಯತೆ ಕೂಡಾ ಆಗಿದೆ. ಕಳೆದ ಎರಡು ದಶಕಗಳಿಂದ ಇಲ್ಲಿಯವರೆಗೆ ದೇಶದ ರಾಜಕೀಯ, ಆರ್ಥಿಕ ಕ್ಷೇತ್ರಗಳಲ್ಲಿ ಹಲವಾರು ಬದಲಾವಣೆಗಳಾಗಿವೆ. ಈ ಬದಲಾವಣೆಗಳು ಕೆಲವರಿಗೆ ತಾತ್ಕಾಲಿಕವಾಗಿ ನೆಮ್ಮದಿ ತರುವದಾದರೆ, ಬಹುತೇಕ ಜನರ ಜೀವನದಲ್ಲಿ ವಿವಿಧ ಸಮಸ್ಯೆಗಳನ್ನು ತರುವ ಮಾರ್ಗಗಳಾಗಿವೆ. ಬದಲಾವಣೆಗಳು ಮತ್ತು ಅವುಗಳಿಂದಾಗುವ ಪರಿಣಾಮಗಳನ್ನು ಸೈದ್ಧಾಂತಿಕ ದೃಷ್ಟಿಕೋನದಿಂದ ವಿಶ್ಲೇಶಿಸಿದಾಗ ಬಹಳಷ್ಟು ಸತ್ಯಗಳನ್ನು ತಿಳಿಯಬಹುದಾಗಿದೆ. ಆರ್ಥಿಕ, ರಾಜಕೀಯ ಮತ್ತು ಸಾಮಾಜಿಕ ಬದಲಾವಣೆಗಳನ್ನು ವೈಜ್ಞಾನಿಕವಾಗಿ ನೋಡಿರುವದರಲ್ಲಿ ಸಮಾಜವಾದ ಸಿದ್ಧಾಂತದ ಕೊಡುಗೆ ಬಹು ವಿಶಿಷ್ಟ. ಸಮಾಜವಾದವು ಭಾರತದಲ್ಲಿ ಕೇವಲ ಪಾಂಡಿತ್ಯದ ಪಥ್ಯ ಸಿದ್ಧಾಂತವಾಗಿರದೆ ಹಲವಾರು ಪಕ್ಷಗಳು, ಧುರೀಣರು ಮತ್ತು ಮೇಧಾವಿಗಳಿಗೆ ದೇಶದ ಆಗುಹೋಗುಗಳನ್ನು ತಿಳಿಯುವ ಪ್ರಾಯೋಗಿಕ ಕನ್ನಡಿಯಂತಾಗಿದೆ. ದೇಶದ ಇತ್ತೀಚೀನ ಗತ ಮತ್ತು ವರ್ತಮಾನದಲ್ಲಿ ವಿವಿಧ ಪಕ್ಷಗಳು, ಧುರೀಣರು ಸಮಾಜವಾದವನ್ನು ಅರ್ಥೈಸಿಕೊಂಡ ಬಗೆಗೆ, ಸಂವಿಧಾನ ಮತ್ತು ಸಮಾಜವಾದದ ಮಧ್ಯೆ ಇರುವ ನಂಟಿಗೆ ಪ್ರತಿಕ್ರಿಯೆ ಮಾಡಿರುವ ಬಗೆಗೆ ತಿಳಿದುಕೊಳ್ಳುವದು ದೇಶ ನಿರಂತರವಾಗಿ ಪ್ರಜಾಪ್ರಭುತ್ವವಾದಿ ಮತ್ತು ಸಮಾಜವಾದಿ ವ್ಯವಸ್ಥೆಯಾಗಿರಬೇಕು ಎಂಬ ಆಶಯಕ್ಕೊಸ್ಕರ ಬಹು ಮುಖ್ಯ ಮತ್ತು ಅತ್ಯಗತ್ಯವಾಗಿದೆ.

'ಸಮಾಜವಾದ' ಎಂಬ ಪದವನ್ನು ದೇಶ ಗಣತಂತ್ರವಾದ ಸುಮಾರು ಎರಡು ದಶಕಗಳ ನಂತರ ಸೇರಿಸಲ್ಪಟ್ಟರೂ ಸಮಾಜವಾದದ ತಿರುಳು ಸಂವಿಧಾನದಲ್ಲಿ ಗಣತಂತ್ರದ ಮೊದಲ ದಿನಗಳಿಂದಲೂ ಸಂವಿಧಾನದ ವಿವಿಧ ಭಾಗಗಳಲ್ಲಿ ಮೂಡಿಬಂದಿರುವ ಸತ್ಯ ಎಲ್ಲರಿಗೂ ತಿಳಿದದ್ದೇ. ಸಂವಿಧಾನದದಲ್ಲಿ ರಾಜ್ಯಾಧಿಕಾರ ನೀತಿಯ ನಿರ್ದೇಶನಾ ತತ್ತ್ವಗಳ ಕುರಿತು ಇರುವ ಭಾಗವನ್ನು ಗಮನಿಸಿದರೆ, ಹಲವಾರು ತತ್ತ್ವಗಳು ಸಮಾಜವಾದ ಸಿದ್ಧಾಂತದ ಸ್ಫೂರ್ತಿಯಿಂದ ಮೂಡಿಬಂದಿರುವ ವಿಷಯವನ್ನು ಅನೇಕರು ವಿವರಿಸಿದ್ದಾರೆ. ದೇಶದ ಸರ್ವ ಜನರ ಕಲ್ಯಾಣ, ಕಾರ್ಮಿಕ ವರ್ಗಕ್ಕೆ ಕೈಗಾರಿಕಾ ನಿಯಂತ್ರಣಾ ಮಂಡಳಿಯಲ್ಲಿ ಭಾಗವಹಿಸುವ ಅವಕಾಶ, ಬಡವರಿಗೆ ಉಚಿತ ಕಾನೂನು ಸಲಹೆ ಹಾಗೂ ಸಮಾಜದಲ್ಲಿರುವ ಅಸಮಾನತೆ ನಿವಾವರಣೆ ಮಾಡುವ ಪ್ರಯತ್ನಗಳು ಸಮಾಜವಾದದ ಸ್ಫೂರ್ತಿಯಿಂದ ಮೂಡಿಬಂದಿರುವ ಕೆಲವು ಪ್ರಮುಖ ತತ್ತ್ವಗಳಾಗಿವೆ. ಖ್ಯಾತ ರಾಜಕೀಯ ತಜ್ಞ ಗ್ರ್ಯಾನವಿಲ್ ಆಸ್ಟಿನ್‌ರವರ ಪ್ರಕಾರ ಭಾರತದ ಸಂವಿಧಾನವು ಒಂದು ಸಾಮಾಜಿಕ ತತ್ತ್ವಗಳ ದಾಖಲೆ. ಈ ವಿಚಾರವನ್ನು ಅವರು ಸಂವಿಧಾನದಲ್ಲಿರುವ ಪ್ರಗತಿಪರ ಅಂಶಗಳನ್ನು ಗಮನದಲ್ಲಿಟ್ಟುಕೊಂಡು ಹೇಳಿರುತ್ತಾರೆ.

ಸಂವಿಧಾನದ ಸಮಾಜವಾದ ತತ್ತ್ವಗಳು ಮತ್ತು ಸ್ವತಂತ್ರ ಭಾರತದ ರಾಜಕೀಯ ಕಳಕಳಿಯ ಬಗೆಗೆ ಗಮನ ಹರಿಸಿದಾಗ ಕೆಲವೊಂದು ಪ್ರಯತ್ನಗಳು ಜನಪರವಾಗಿ ಕಂಡರೂ ಅವುಗಳು ನ್ಯೂನತೆಗಳಿಂದ ಪ್ರತ್ಯೇಕವಾದುವುಗಳಲ್ಲ. ದೇಶದ ಮೊದಲ ಪ್ರಧಾನ ಮಂತ್ರಿ ನೆಹರುರವರು ದೇಶದ ಸಮಗ್ರ ಅಭಿವೃದ್ಧಿಗಾಗಿ ಸಮಾಜವಾದದ ನಿಟ್ಟಿನಲ್ಲಿ ಯೋಜನಾ ಆಯೋಗದ ಮುಖಾಂತರ ಅನೇಕ ಬದಲಾವಣೆಗಳನ್ನು ತರಲು ಪ್ರಯತ್ನಿಸಿದರು. ಸಮಾಜವಾದದ ನಿಟ್ಟಿನಲ್ಲಿ ಅನೇಕ ರಾಜ್ಯ ಸರ್ಕಾರಗಳು ಭೂ ಸುಧಾರಣೆ ಕಾಯ್ದೆಗಳನ್ನು ಕಾರ್ಯರೂಪಕ್ಕೆ ತಂದವು. ಆದರೆ, ಕೆಲವು ರಾಜ್ಯಗಳನ್ನು ಹೊರತು ಪಡಿಸಿದಂತೆ ನಿರೀಕ್ಷಿತ ಬದಲಾವಣೆ ಬಹಳಷ್ಟು ರಾಜ್ಯಗಳಲ್ಲಿ ತರಲಾಗಲಿಲ್ಲ. ಸ್ವತಂತ್ರ ಭಾರತದ 65 ವರ್ಷಗಳಿಗಿಂತಲೂ ಹೆಚ್ಚಿನ ಪ್ರಜಾಪ್ರಭುತ್ವವಾದಿ ಜೀವನವನ್ನು ವಸ್ತುನಿಷ್ಠ ದೃಷ್ಟಿಕೋನದಿಂದ ನೋಡಿದಾಗ ದೇಶದ ಅಭಿವೃದ್ಧಿಯ ಚಿಂತನೆ ಮತ್ತು ಪ್ರಕ್ರಿಯೆಯಲ್ಲಿ ಸಮಾಜವಾದವು ತನ್ನದೇ ಆದ ಪಾತ್ರವನ್ನು ವಹಿಸಿದೆ. ಮೊದಲಿಗೆ, ನೆಹರುರವರು 'ಸಮಾಜವಾದ' ಹೆಸರಿನಲ್ಲಿ ಕೆಲವೊಂದು ತಪ್ಪುಗಳನ್ನು ಮಾಡುವಾಗ, ದೇಶದ ಹಿರಿಯ ಎಡಪಂಥೀಯ ಸಮಾಜವಾದಿ ನಾಯಕರು ನೆಹರುರವರ ಮಾರ್ಗವನ್ನು ವಿಮರ್ಷಾತ್ಮಕವಾಗಿ ನೋಡಿ ದೇಶದ ಆರ್ಥಿಕ ನೀತಿಗಳು ಜನಪರವಾಗಿರುವಂತೆ ಬಹಳಷ್ಟು ಪ್ರಯತ್ನಿಸಿದರು. ಮುಂದೆ, ಇಂದಿರಾ ಗಾಂಧಿಯವರ ಸಮಯದಲ್ಲಿ, ಅವರ ಪ್ರಜಾಪ್ರಭುತ್ವ ವಿರೋಧಿ ಚಟುವಟಿಕೆಗಳನ್ನು ಸಮಾಜವಾದಿಗಳಾದ ಲೋಹಿಯಾ ಮತ್ತು ಜಯಪ್ರಕಾಶ ನಾರಾಯಣರವರು ವಿರೋಧಿಸುವ ಮೂಲಕ ದೇಶದಲ್ಲಿ ಸಮಾಜವಾದಿ ಚಳುವಳಿ ಮತ್ತು ರಾಜಕೀಯಕ್ಕೆ ಒಂದರ್ಥದಲ್ಲಿ ಜೀವಕಳೆಯನ್ನು ತುಂಬಿ ದೇಶದ ಪ್ರಜಾತಂತ್ರಿಕ ರಾಜಕೀಯಕ್ಕೆ ಅರ್ಥವನ್ನು ಕೊಟ್ಟರು. ಒಟ್ಟಿನಲ್ಲಿ, ನಾಲ್ಕು ದಶಕಗಳವರೆಗೆ ಅಂದರೆ 1950ರಿಂದ 1980ರ ಕೊನೆಯವರೆಗೂ ದೇಶದ ಸಮಗ್ರ ಜನಪರ ಅಭಿವೃದ್ಧಿ ಕುರಿತು ಸಮಾಜವಾದಕ್ಕೆ ಸಂಬಂಧಪಟ್ಟ ವಿಚಾರಗಳಲ್ಲಿ ಒಂದು ತರಹದ ಆಂತರಿಕ ಪರಸ್ಪರ ವಿಮರ್ಷೆ ನಡೆಯಿತು.

90ರ ದಶಕದ ಪ್ರಾರಂಭ'ದಿಂದ ಇಲ್ಲಿಯುವರೆಗೂ ದೇಶದಲ್ಲಿಪರಿಚಯಿಸಿದ ಮತ್ತು ಕಾರ್ಯಗತಗೊಳ್ಳುತ್ತಿರುವ ಹೊಸ ಆರ್ಥಿಕ ನೀತಿಗಳನ್ನು ದೇಶದ ಎಡಪಂಥೀಯ ಸಮಾಜವಾದಿ ಪಕ್ಷಗಳು ನಿರಂತರವಾಗಿ ವಿಮರ್ಷಿಸುತ್ತಾ ಅವುಗಳಿಂದಾಗುವ ಪರಿಣಾಮಗಳನ್ನು ಸೈದ್ಧಾಂತಿಕವಾಗಿ ತಿಳಿಸುತ್ತಾ ಬಂದಿವೆ. ದೇಶದ ಎಲ್ಲ ರಾಜಕೀಯ ಪಕ್ಷಗಳು ದೇಶದ ಹೆಚ್ಚಿನ ಜನತೆಯ ಮೇಲೆ ಆಗುತ್ತಿರುವ ಪರಿಣಾಮಗಳನ್ನು ಗಮನಕ್ಕೆ ತೆಗೆದುಕೊಳ್ಳದೆ ಹೊಸ ಆರ್ಥಿಕ ನೀತಿಗಳನ್ನು ಪರೋಕ್ಷ ಮತ್ತು ಅಪರೋಕ್ಷವಾಗಿ

ಬೆಂಬಲಿಸುತ್ತಾ ಬಂದಿವೆ. ಒಂದರ್ಥದಲ್ಲಿ ಹೇಳಬೇಕಾದರೆ, ಎಡಪಂಥೀಯ ಪಕ್ಷಗಳನ್ನು ಹೊರತುಪಡಿಸಿದಾ ಮಿಕ್ಕ ಎಲ್ಲ ಪಕ್ಷಗಳು ನವ ಉಧಾರವಾದದ ನಿಯೋಗಿಗಳಾಗಿವೆ. ಇಂತಹ ಸಂದರ್ಭದಲ್ಲಿ ದೇಶದ ಸಾಮಾನ್ಯ ಜನತೆಯ ಬಗ್ಗೆ ಕಳಕಳಿಯನ್ನು ತೋರಿಸಿ ಸಮಾಜವಾದವನ್ನು ಸೃಜನಾತ್ಮಕವಾಗಿ ನಿರೂಪಿಸುತ್ತ ಹೊಸ ಆರ್ಥಿಕ ನೀತಿಗಳನ್ನು ವಿರೋಧಿಸುತ್ತಲೇ ಎಡಪಂಥೀಯ ಪಕ್ಷಗಳು ಬಂದಿವೆ ಮತ್ತು ದೇಶದಲ್ಲಿ ಆರ್ಥಿಕ ಪ್ರಜಾಪ್ರಭುತ್ವವನ್ನು ತರಲು ನಿರಂತರವಾಗಿ ಪ್ರಯತ್ನಿಸುತ್ತಿವೆ. ಇಲ್ಲಿ ಉದಾಹರಣೆಗಾಗಿ ಹೇಳಬೇಕಾದರೆ, ಗ್ರಾಮೀಣ ಉದ್ಯೋಗ ಖಾತ್ರಿಯಂತಹ ಕಾರ್ಯಕ್ರಮವನ್ನು ಯುಪಿಎ-ಪ್ರಥಮ ಸರ್ಕಾರವು ದೇಶಕ್ಕೆ ಪರಿಚಯಿಸುವದರಲ್ಲಿ ಎಡಪಕ್ಷಗಳು ಮಹತ್ವದ ಪಾತ್ರವನ್ನು ವಹಿಸಿವೆ.

90ರ ದಶಕದಿಂದ ಇಲ್ಲಿಯವರೆಗೆ ಸಮಾಜವಾದದ ಕಡೆಗೆ ಒಲವಿರುವ ಮತ್ತು ಯಾವದೇವಾದದಿಂದ ತಟಸ್ಥವಿರುವ ಅನೇಕ ತಜ್ಞರು, ಸಾಹಿತಿಗಳು, ಪತ್ರಕರ್ತರು ಮತ್ತು ಸಮಾಜ ವಿಜ್ಞಾನಿಗಳು ಆರ್ಥಿಕ ಉಧಾರವಾದದ ಹೆಸರಿನಲ್ಲಿ



ನಡೆಯುತ್ತಿರುವ ಬಂಡವಾಳಶಾಹಿಯ ಅಟ್ಟಹಾಸವನ್ನು ವಿಮರ್ಶಿಸುತ್ತಾ, ವಿವರಸುತ್ತಾ ಬಂದಿದ್ದಾರೆ. ಇಂತಹವರಲ್ಲಿ ಅಮರ್ತ್ಯ ಸೇನ್, ಜೀನ್ ಡ್ರೇಜ, ದೀಪಕ ನಾಯರ್, ಪ್ರಭಾತ ಪಟ್ನಾಯಕ್ ಅಮಿತ್ ಭಾದುರಿ, ಅಚಿನ್ ವನಾಯಕ, ಪಿ.ಸಾಯಿನಾಥ, ಶಿವ ವಿಶ್ವನಾಥನ್ ಮತ್ತು ಇನ್ನಿತರರ ಕೊಡುಗೆ ಶ್ಲಾಘನೀಯವಾದದ್ದು. ಆದರೆ ಇವರೆಲ್ಲರ ಅಭಿಪ್ರಾಯ ಮತ್ತು ಸೂಚನೆಗಳನ್ನು ರಾಜಕೀಯ ವರ್ಗ ತಕ್ಕ ಮಟ್ಟಿಗೆ ಗಮನ ಕೊಡದೆ ತಜ್ಞರೆನಿಸಿಕೊಂಡ ಕೆಲವೊಂದು ಕಾರಭಾರಿಗಳ ಸೂಚನೆ ಹಾಗೂ ಸಲಹೆಗಳಿಗೆ ಗಮನ ಕೊಡುತ್ತಾ ದೇಶದ ಆರ್ಥಿಕ ಮತ್ತು ರಾಜಕೀಯ ಸ್ಥಿತಿಯನ್ನು ಇನ್ನೂ ಕೆಳಮಟ್ಟಕ್ಕೆ ತಳ್ಳಿ ಜನ ವಿರೋಧಿಯಾಗುತ್ತಿದೆ. ಇತ್ತೀಚೀನ ಬೆಳವಣಿಗೆಗಳನ್ನು ಗಮನಸಿದಾಗ ದೇಶ ಸಂವಿಧಾನದ ವಿರುದ್ಧ ನಡೆಯುತ್ತಿದೆ ಎಂಬುದು ಖಚಿತವಾಗುತ್ತದೆ. ಇಂತಹ ಸಮಯದಲ್ಲಿ ಸಮಾಜವಾದದ ಅನಿವಾರ್ಯತೆ ಇನ್ನೂ ಹೆಚ್ಚಿನದಾಗಿದೆ.

ದೇಶದ ಇಂತಹ ಒಂದು ವಾಸ್ತವಿಕ ಪರಿಸ್ಥಿತಿಯಲ್ಲಿ ಸಮಾಜವಾದಿಗಳೆಂದು ಗುರುತಿಸಿಕೊಂಡಿರುವ, ಕರೆದುಕೊಳ್ಳುವ ಮತ್ತು ಸಕ್ರಿಯವಾಗಿರುವ ಎಲ್ಲ ವ್ಯಕ್ತಿಗಳು, ಸಂಘಟನೆಗಳು ನೆನಪಿಡುವ ಮತ್ತು ಸದಾ ಪಾಲಿಸುವ ವಿಷಯವೇನಂದರೆ ಸಮಾಜವಾದ ಸಮಾಜಕ್ಕಾಗಿಯೇ ಹೊರತು ಯಾವದೇ ಕೆಲವು ವ್ಯಕ್ತಿಗಳಿಗೋಸ್ಕರವಲ್ಲ ಮತ್ತು ಸೀಮಿತ ಪಕ್ಷ ಹಾಗೂ ಸಂಘಟನೆಗಳಿಗೋಸ್ಕರವಲ್ಲ ಎಂಬುದು. ಸೈದ್ಧಾಂತಿಕವಾಗಿ ಕಾರ್ಲ್ ಮಾರ್ಕ್ಸ್‌ರವರು ಹೇಳಿರುವ ವೈಜ್ಞಾನಿಕ ಸಮಾಜವಾದ ಮತ್ತು ಆಮೇಲೆ ಬಂದಿರುವ ವಿಕಸಿತ ಸಮಾಜವಾದಿಗಳಾದ ಫೇಬಿಯನಿಸಂ, ಗಿಲ್ಡ್ ಸೋಶಿಯಲಿಸಂ, ಸಿಂಡಿಕ್ಯಾಲಿಸಂ ಇವುಗಳ ನಡುವೆ ಮಾರ್ಗ ಮತ್ತು ವಿಧಾನದ ಬಗ್ಗೆ ವ್ಯತ್ಯಾಸವಿದ್ದರೂ ಅವುಗಳ ಮೂಲ ಉದ್ದೇಶ ಸಮತಾ ಸಮಾಜದ ನಿರ್ಮಾಣವಾಗಿರುತ್ತದೆ. ಈ ವಿಷಯವನ್ನು ದೇಶದ ಸಮಾಜವಾದಿಗಳು ಅರಿತು, ತಮ್ಮ ನಡುವಿನ ತಾತ್ವಿಕ ವ್ಯತ್ಯಾಸ ಮತ್ತು ಭಿನ್ನಾಭಿಪ್ರಾಯಗಳನ್ನು ಮರೆತು ಹಾಗೂ ತೊರೆದು ಸಮತಾವಾದದ ದಿಸೆಯಲ್ಲಿ ನಡೆದರೆ ದೇಶಕ್ಕೂ ಮತ್ತು ಸಮಾಜವಾದಕ್ಕೂ ಒಳಿತು. ಸಮಾಜವಾದಿ ಪಕ್ಷಗಳೆಂದು ಗುರಿತಿಸಿಕೊಂಡಿರುವ ಕೆಲವು ಪಕ್ಷಗಳನ್ನು ಹೊರತುಪಡಿಸಿ ಸಮಾಜವಾದದ ಪ್ರಾಮಾಣಿಕ ಚರ್ಚೆ ಮತ್ತು ಪಾಲನೆಯಲ್ಲಿ ಭಾರತದ ಎಡಪಂಥೀಯ ಪಕ್ಷಗಳು ಬಹುಮಟ್ಟಿಗೆ ಕೆಲಸ ಮಾಡಿವೆ ಮತ್ತು ಸಫಲವಾಗಿವೆ. ಆದರೆ, ಸುಮಾರು ದಶಕಗಳಿಂದಲೂ ಅವುಗಳ ನಡುವೆ ಇರುವ ಸೈದ್ಧಾಂತಿಕ ಭಿನ್ನಾಭಿಪ್ರಾಯಗಳಿಂದಾಗಿ ಸಮಾಜಕ್ಕೆ ದೊರಕಬೇಕಾದ ನೈಜ ಸಮತಾ ಸಮಾಜದ ಪರಿಕಲ್ಪನೆ ಸಾಧಿಸುವದು ಆಗುತ್ತಿಲ್ಲ. ಸದ್ಯದ ಪರಸ್ಥಿತಿಯಲ್ಲಿ ಭಿನ್ನಾಭಿಪ್ರಾಯಗಳನ್ನು ಮರೆತು ಸಮಾಜವಾದದಲ್ಲಿ ನಂಬಿಕೆ ಇರುವ ಎಲ್ಲ ಧುರೀಣರು, ಪಕ್ಷಗಳು, ಸಂಘ-ಸಂಸ್ಥೆಗಳು ಸಮಾಜವಾದವನ್ನು ಸಮಕಾಲಿನ ಜಗತ್ತಿಗೆ ಅನ್ವಯವಾಗುವಂತೆ ಸೃಜನಾತ್ಮಕ ರೀತಿಯಲ್ಲಿ ಸಮಾಜವಾದಿ ವ್ಯವಸ್ಥೆಯಡೆಗೆ ಕೊಂಡೊಯ್ಯುವದು ಬಹು ದೊಡ್ಡ ಜವಾಬ್ದಾರಿಯಾಗಿದೆ.

ಕಾರ್ಲ್ ಮಾರ್ಕ್ಸ್ ಹೇಳಿದ ಸಮಾಜವಾದದ ಬಗ್ಗೆ ಕೆಲವೊಂದು ಅಭಿಪ್ರಾಯಗಳಿವೆ. ಕೆಲವರ ಪ್ರಕಾರ ವರ್ಗರಹಿತ ಸಮಾಜ ನಿರ್ಮಾಣ ಪ್ರಕ್ರಿಯೆಯಲ್ಲಿ ವರ್ಗ ಸಂಘರ್ಷದಿಂದ ಉಂಟಾಗುವ ಹಿಂಸೆಯಿಂದ ವ್ಯವಸ್ಥೆಯಲ್ಲಿ ಅರಾಜಕತೆ ಉಂಟಾಗುವ ಸಾಧ್ಯತೆಗಳು ಬಹಳ. ಇನ್ನೂ ಕೆಲವರ ಪ್ರಕಾರ, ವರ್ಗ ಸಂಘರ್ಷದ ಪರಿಣಾಮವಾಗಿ ಸರ್ವಾಧಿಕಾರ ಬರುವ ಸಾಧ್ಯತೆಗಳಿರುತ್ತವೆ. ವರ್ಗರಹಿತ ಸಮಾಜ ಮತ್ತು ಕಾರ್ಮಿಕರ ಸರ್ವಾಧಿಕಾರದ ಹೆಸರಿನಲ್ಲಿ ಪಕ್ಷದ ಪ್ರಾಬಲ್ಯ ಜಾಸ್ತಿಯಾಗುತ್ತೆದೆ ಎಂದು ಕೆಲವರು ಅಭಿಪ್ರಾಯಿಸಿದ್ದಾರೆ. ಇಂತಹ ವಿಶ್ಲೇಷಣೆಗಳು ಕೇವಲ ವಿಕಸಿತ ಸಮಾಜವಾದ ಸಿದ್ಧಾಂತಿಗಳಿಂದ ಬರುವದಲ್ಲದೆ ಉದಾರವಾದಿ ಸಿದ್ಧಾಂತಿಗಳಿಂದ ಕೂಡಾ ಬಂದಿವೆ. ಇದರಲ್ಲಿ ವ್ಯತ್ಯಾಸವೇನಂದರೆ ವಿಕಸಿತ ಸಮಾಜವಾದಿಗಳಲ್ಲಿ ಒಂದು ತರಹದ ಕಳಕಳಿ ಕಂಡರೆ, ಉಧಾರವಾದಿ ಚಿಂತಕರಲ್ಲಿ ಜನಪರರಹಿತ ವಿಮರ್ಷೆಗಾಗಿಯೇ ಇರುವ ವಿಮರ್ಶೆಯನ್ನು ಕಾಣಬಹುದು. ಮಾರ್ಕ್ಸ್‌ರ ಕುರಿತು ಇರುವ ವಿಮರ್ಶೆಗಳನ್ನೂ ಜಗತ್ತಿನಲ್ಲಿ 20ನೇ ಶತಮಾನದಲ್ಲಿ ನಡೆದಿರುವ ಸಮಾಜವಾದಿ ಕ್ರಾಂತಿಗಳನ್ನು ಹಿನ್ನೆಲೆಯಾಗಿಟ್ಟುಕೊಂಡು ನೋಡಿದಾಗ ಕೆಲಮಟ್ಟಿಗೆ ಸರಿಯೆನಿಸಿದರೂ ಅವುಗಳನ್ನು ಖಚಿತ ಸತ್ಯಗಳೆಂದು ಒಪ್ಪಲು ಸಾಧ್ಯವಾಗುವದಿಲ್ಲ. ರಷ್ಯಾ, ಚೀನಾ ದೇಶಗಳಲ್ಲಿ ನಡೆದಿರುವ ಸಮಾಜವಾದದ ಕ್ರಾಂತಿಗಳು ವಿಮರ್ಶೆಗಳ ಸತ್ಯಕ್ಕೆ ಸಮೀಪವೆನಿಸಿದರು ಇದೆ ಶತಮಾನದಲ್ಲಿ ಕ್ಯೂಬಾದಲ್ಲಿ ರಾಷ್ಟ್ರದಲ್ಲಿ ನಡೆದಿರುವ ಸಮಾಜವಾದಿ ಕ್ರಾಂತಿಯು ಈ ಎಲ್ಲ ವಿಮರ್ಶೆಗಳಿಂದ ಅಪವಾದಾತ್ಮಕವಾದದ್ದು. ಕೆಲವೊಂದು ವಿಮರ್ಷೆಗಳನ್ನು ಬದಿಗಿರಿಸಿ ಮತ್ತು ನಕ್ಸಲ್‌ವಾದವನ್ನು ಪ್ರತ್ಯೇಕಿಸಿ ಭಾರತದಲ್ಲಿ ಇಲ್ಲಿಯವರಗೆ ನಡೆದ ಸಮಾಜವಾದಿ ಚಟುವಟಿಕೆಗಳು ಕೇವಲ ಭಾರತಕ್ಕೆ ಕೊಡುಗೆಗಳ ಇಡೀ ಜಗತ್ತಿಗೆ ಕೊಟ್ಟ ವಿಶಿಷ್ಟ ಸೈದ್ಧಾಂತಿಕ ಕೊಡುಗೆಯಾಗಿವೆ. ಜಗತ್ತಿನಲ್ಲಿ ಪ್ರಪ್ರಥಮ ಪ್ರಜಾಪ್ರಭುತ್ವಿಕ ಸಮಾಜವಾದಿ ಸರ್ಕಾರ ರಚಿಸಿದ ಹೆಗ್ಗಳಿಕೆ ದೇಶದ ವಾಮಪಂಥೀಯ ಸಮಾಜವಾದಿ ಪಕ್ಷಗಳದ್ದು. ಒಂದ ಅರ್ಥದಲ್ಲಿ ಹೇಳಬೇಕಾದರೆ, ಸಮಾಜವಾದ ಮತ್ತು ಪ್ರಜಾಪ್ರಭುತ್ವದ ನಡುವಿನ ಸಾಮರಸ್ಯ ಮತ್ತು ಅನೋನ್ಯತೆಯನ್ನು ಪ್ರಾಯೋಗಿಕ ರೂಪದಲ್ಲಿ ದೇಶದ ವಾಮಪಂಥೀಯ ಪಕ್ಷಗಳು ಸಾಬೀತುಪಡಿಸಿವೆ.

ಯಾವುದೇ ಸಮಾಜದಲ್ಲಿರುವ ಆರ್ಥಿಕ ಅಸಮಾನತೆಯನ್ನು ನಿರ್ಮೂಲನೆ ಮಾಡಲು ಅಲ್ಲಿರುವ ಸಮಾಜದ ಮೂಲಭೂತ ಸ್ತರಗಳನ್ನು ಅಧ್ಯಯನ ಮಾಡಿ ಅದಕ್ಕೆ ಸೂಕ್ತವಾಗುವ ಪರಿಹಾರಗಳನ್ನು ಸೂಚಿಸಬೇಕಾಗುತ್ತದೆ. ಸಮಾಜದಲ್ಲಿರುವ ಅಸಮಾನತೆಯ ಉಗಮಗಳನ್ನು ತಿಳಿಯಲು ಸೈದ್ಧಾಂತಿಕ ನೆರವು ಬಹಳ ಅವಶ್ಯಕವಾಗಿರುವದರಿಂದ ಸಮಾಜವಾದ ಮತ್ತೆ ಮತ್ತೆ ಪ್ರಚಲಿತವಾಗಿರುವದು ನಮ್ಮೆಲ್ಲರಿಗೂ ತಿಳಿದಿರುವ ಸತ್ಯ. ಕೆಲವರ ಪ್ರಕಾರ ಅಸಮಾನತೆಯನ್ನು

ತಿಳಿಯಲು ಮತ್ತು ಹೋಗಲಾಡಿಸಲು ಕೇವಲ ಸಮಾಜವಾದವೇ ಬೇಕಾಗಿಲ್ಲ, ಇತರ, ಅಂದರೆ ಉಧಾರವಾದದ ಮಾರ್ಗ ಮತ್ತು ಸಿದ್ಧಾಂತದಿಂದ ಕೂಡಾ ಈ ಸಮಸ್ಯೆಗಳನ್ನು ಪರಿಹರಿಸಬಹುದು ಎಂಬುದು ಆದರೆ ಆಧುನಿಕ ಪಾಶ್ಚಿಮಾತ್ಯ ರಾಜಕೀಯ ಸಿದ್ಧಾಂತಗಳನ್ನು ನೋಡಿದಾಗ ನಮಗೆ ವಿವರವಾಗಿ ಮಾನವ ಜೀವನಕ್ಕೆ ಅವಶ್ಯಕತೆಯಿರುವ ಅನೇಕ ವಿಷಯಗಳಾದ ಸಾಮಾಜಿಕ, ರಾಜಕೀಯ ಮತ್ತು ಆರ್ಥಿಕ ಹಕ್ಕುಗಳು, ಸ್ವಾತಂತ್ರ್ಯ ಇತ್ಯಾದಿಗಳ ಮೇಲೆ ನಮಗೆ ಉಧಾರವಾದದಿಂದ ನಿಶ್ಚಿತ ಉತ್ತರ ದೊರಕಿಲ್ಲ. ಮೇಲಾಗಿ, ಉದಾರವಾದಕ್ಕೆ ಕೇವಲ ರಾಜಕೀಯ ಮತ್ತು ಸಾಮಾಜಿಕ ಸಮಾನತೆ ಮುಖ್ಯವಾಗಿರುವದರಿಂದ ಆರ್ಥಿಕ ಸಮಾನತೆ ಅದರ ಪರಿಗಣನೆಗೆ ಬಹಳಷ್ಟಾಗಿ ಬರುವದಿಲ್ಲ. ಒಂದು ಹೆಜ್ಜೆ ಮುಂದೆ ಹೋಗಿ ಉದಾರವಾದದ ಮೂಲ ಗುಣದ ಬಗ್ಗೆ ಹೇಳಬೇಕಾದರೆ, ಅದು ತನ್ನಂದ ತಾನೇ ಪ್ರಗತಿಪರ ವಿಚಾರಗಳ ಕಡೆ ಹೋಗುವಂತಹ ಸಿದ್ಧಾಂತವಲ್ಲ. ಅದಕ್ಕೆ ಯಾವಾಗಲೂ ಬಹುಕಠೋರವಾದ ವಿರೋಧ ಮತ್ತು ವಿಮರ್ಷೆ ಬಂದಾಗ ಮಾತ್ರ ತನ್ನ ಗುಣವನ್ನು ಬದಲಾಯಿಸಲು ಪ್ರಯತ್ನಿಸುತ್ತದೆ. ಉದಾರವಾದದ ಇತಿಹಾಸ ಮತ್ತು ವಾಸ್ತವವನ್ನು ಗಮನಿಸಿದರೆ ಅದರಲ್ಲಿ ಪ್ರಗತಿಪರ ಬೆಳವಣಿಗೆ ಕಿಂಚಿತ್ತಾದರೂ ಕಂಡರೆ ಅದಕ್ಕೆ ಸಮಾಜವಾದವೇ ಕಾರಣ ಎಂದು ಹೇಳಲು ಯಾವದೇ ಸಂಶಯವಿಲ್ಲ. ಉದಾರಹಣೆಗೆ ಹೇಳುವದಾದರೆ, ಜಗತ್ತಿನಲ್ಲಿ ಕಲ್ಯಾಣ ರಾಜ್ಯ ಎಂಬ ಕಲ್ಪನೆ ಉದಾರವಾದಿ ಚಿಂತಕರಿಂದ ಬರಬೇಕಾದರೆ ಅದಕ್ಕೆ ಯುರೋಪಿನಲ್ಲಿ ಘಟಿಸಿರುವ ಸಮಾಜವಾದಿ ಚಿಂತನೆಗಳು ಕಾರಣ. ಉಧಾರವಾದದ ಮೂಲಭೂತ ಸಿದ್ಧಾಂತದಲ್ಲಿ ಬದಲಾವಣೆ ಬರಬೇಕಾದರೆ ಕಾರ್ಲ್ ವರ್ಕ್ಸ್‌ರ ವೈಜ್ಞಾನಿಕ ಸಮಾಜವಾದದಿಂದ ಹಿಡಿದು ಮುಂದೆ ಬರುವ ವಿಕಸಿತ ಸಮಾಜವಾದಿ ಚಿಂತನೆಗಳು ಬಹಳಷ್ಟು ಪ್ರಮುಖ ಪಾತ್ರವನ್ನು ವಹಿಸಿವೆ. ಇಲ್ಲಿ ಭಾರತದ ಬಗ್ಗೆ ಹೇಳಬೇಕಾದರೆ, ಹೊಸ ಆರ್ಥಿಕ ನೀತಿ ಜಾರಿಗೆ ಬಂದ ಮೊದಲ ದಶಕದಲ್ಲೂ ಮತ್ತು ಆ ನಂತರದ ದಶಕಗಳಲ್ಲೂ ದೇಶದ ಅಭಿವೃದ್ಧಿ ಚಿಂತನೆ ಮತ್ತು ಕಾರ್ಯದಲ್ಲಿ ಏನಾದರೂ ಜನಪರ ಬದಲಾವಣೆ ಕಂಡಿದ್ದರೆ ಅದರ ಗೌರವ ಸಮಾಜವಾದಿ ಚಿಂತನೆ ಮತ್ತು ಹೋರಾಟಕ್ಕೆ ಸಲ್ಲುತ್ತದೆ.

ವಾಸ್ತವದಲ್ಲಿ ಸಮಾಜವಾದದ ಬಗ್ಗೆ ಮಾತನಾಡುವಾಗ ಕೆಲವೊಂದು ಇತ್ತೀಚಿನ ರಾಜಕೀಯ ಬೆಳವಣಿಗೆಗಳ ಕುರಿತು ಸಹಿತ ಹೇಳಬೇಕಾಗುತ್ತದೆ. ಇತ್ತೀಚೆಗೆ ದೇಹಲಿ ವಿಧಾನ ಸಭೆ ಚುನಾವಣೆಯಲ್ಲಿ ಆಮ್ ಆದ್ಮಿ ಪಕ್ಷ ಕಂಡ ವಿಜಯಕ್ಕೆ ಕೇವಲ ಕೆಲವೇ ಕೆಲವು ಕಾರಣಗಳಿರಲಿಲ್ಲ. ದೆಹಲಿಯಂತಹ ಮಹಾನಗರಗಳಲ್ಲಿ ವಾಸಿಸುವ ಬಡಕಾರ್ಮಿಕರು ಎದಿರುಸುತ್ತಿರುವ ಸಮಸ್ಯೆಗಳು ಮತ್ತು ಅವರ ಈ ಸಮಸ್ಯೆಗಳಿಗೆ ಪಕ್ಷ ಪರಿಹಾರ ಒದಗಿಸುತ್ತದೆ ಎಂಬ ನಿರೀಕ್ಷೆ ಆ ಪಕ್ಷದ ವಿಜಯಕ್ಕೆ ಪ್ರಮುಖ ಕಾರಣವಾಗಿದೆ. ಯೋಗೇಂದ್ರ ಯಾದವ್, ಪ್ರಶಾಂತ ಭೂಷಣ್, ಆನಂದ ಕುಮಾರ್, ಕಮಲ ಮಿತ್ರಾ ಚಿನಾಯ್ ಅವರಂತಹ ಸಮಾಜವಾದಿಗಳನ್ನು ಮತ್ತು ಇನ್ನಿತರ ಪ್ರಗತಿಪರರನ್ನು ತನ್ನ ಆದರ್ಶವಾದದ ರೂವಾರಿಗಳೆಂದು ಬಿಂಬಿಸಿರುವದು ಪಕ್ಷದ ಸಫಲತೆಯ ಇನ್ನೊಂದು ಕಾರಣವಾಗಿತ್ತು. ಆದರೆ ಈಹೊತ್ತು ಆಮ್ ಆದ್ಮಿ ಪಕ್ಷವು ಇಲ್ಲಿ ತಿಳಿಸಿರುವ ವ್ಯಕ್ತಿಗಳಲ್ಲಿ ಕೆಲವರಿಂದ ತಿಳಿಯದ ಕಾರಣಗಳಿಂದ ದೂರವಾಗಿದೆ ಮತ್ತು ಬಹಳಷ್ಟು ಜನರ ನಂಬಿಕೆಯನ್ನು ಕಳೆದುಕೊಂಡಿದೆ. ಯೋಗೇಂದ್ರ ಯಾದವ್ ಎರಡು ವರ್ಷಗಳಿಗಿಂತ ಹೆಚ್ಚು ದಿನಗಳ ಕಾಲ ಆಮ್ ಆದ್ಮಿ ಪಕ್ಷದಲ್ಲಿರುವಾಗ ಅವರು ದೇಶಕ್ಕೆ ಸದ್ಯದ ಪರಿಸ್ಥಿತಿಯಲ್ಲಿ ಅವಶ್ಯವಿರುವ ಕೆಲವೊಂದು ವಿಷಯಗಳಾದ ಅಧಿಕಾರ ವಿಕೇಂದ್ರೀಕರಣ, ಸಾಮಾನ್ಯ ಜನತೆಯ ಅಧಿಕಾರ, ರಾಜಕೀಯ ಮತ್ತು ಸಾಮಾಜಿಕ ಪ್ರಜಾಪ್ರಭುತ್ವಗಳ ಬಗ್ಗೆ ಮಾತನಾಡಿದ ವಿಚಾರಗಳಲ್ಲಿ ಲೋಹಿಯಾವಾದದ ಛಾಪು ಕಂಡುಬರುತ್ತಿತ್ತು. ದೇಶದ ಸಮಗ್ರ ಅಭಿವೃದ್ಧಿಯ ಚಿಂತನೆ ಮತ್ತು ಹೋರಾಟದಲ್ಲಿ ತೊಡಗಿಕೊಂಡಿರುವ ವಾಮಪಂಥೀ ಪಕ್ಷಗಳ ವಿಚಾರಕ್ಕೆ ಪೂರಕವಾಗಿ ಯೋಗೇಂದ್ರ ಯಾದವ್‌ರಂತಹ ವಿಚಾರವಾದಿ ವ್ಯಕ್ತಿಗಳನ್ನೂ ಒಳಗೊಂಡಂತೆ ಆಮ್ ಆದ್ಮಿ ಪಕ್ಷವು ದೇಶದ ಒಳಿತಿಗಾಗಿ ಒಂದು ಹೊಸ ಶಕ್ತಿಯಾಗಿ ಹೊರಬಂದಿತ್ತು. ಆದರೆ, ಹೊಸ ಆಶಯವನ್ನು ಮೂಡಿಸಿದ್ದ ಈ ಪಕ್ಷ ಅಧಿಕಾರಕ್ಕೆ ಬಂದ ಮೇಲೆ ತನ್ನ ಜವಾಬ್ದಾರಿಯನ್ನು ಸೂಕ್ತವಾಗಿ ನಿಭಾಯಿಸಲಿಲ್ಲ. ಪಕ್ಷವು ದೇಶಕ್ಕೆ ಅವಶ್ಯವಿರುವ ಸಮಾಜವಾದಿ ಶಕ್ತಿಯಾಗದೆ ಕೆಲವೊಂದು ಸಾಂಪ್ರದಾಯಿಕ ಮತ್ತು ಪ್ರಗತಿಪರ ವಿಚಾರಗಳಿಂದ ಹಿಂದೆ ಸರಿಯುವ ಶಕ್ತಿಗಳ ಹೊಸ ತಾಣವಾಯಿತು. ಇದಕ್ಕೆ ಪಕ್ಷದ ಹಿರಿಯ ಧುರೀಣರಾದ ಅರವಿಂದ ಕೇಜ್ರಿವಾಲ ಅವರ ಅಸ್ಪಷ್ಟ ವಿಚಾರ ಮತ್ತು ನಿರ್ಣಯಗಳೂ ಕೂಡಾ ಸಮಾನವಾಗಿ ಕಾರಣವಾಗಿವೆ. ಸೈದ್ಧಾಂತಿಕ ಮತ್ತು ಆದರ್ಶದ ವಿಷಯದಲ್ಲಿ ಆಮ್ ಆದ್ಮಿ ಪಕ್ಷದ ಹಿನ್ನಡೆ ಸಮಾಜವಾದದ ಹಿನ್ನಡೆಯೆಂದು ಜನರಲ್ಲಿ ಭಾವನೆ ಬರದ ಹಾಗೆ ನೋಡಿಕೊಳ್ಳುವದು ವಾಮಪಂಥೀ ಪಕ್ಷಗಳ ಜವಾಬ್ದಾರಿಯಾಗಿದೆ.

ಸಮಾಜವಾದದ ಹೆಸರಿನಲ್ಲಿ ಕೆಲವೊಂದು ರಾಜಕೀಯ ಧುರೀಣರು ರಾಜಕೀಯ ಪಕ್ಷಗಳನ್ನು ಕಟ್ಟಿ ತಮ್ಮ ವ್ಯಯಕ್ತಿಕ ರಾಜಕಾರಣ ಮಾಡುತ್ತಿರುವದು ಎಲ್ಲರಿಗೂ ಗೊತ್ತಿರುವ ವಿಷಯ. ಇಂತಹ ಪಕ್ಷಗಳಲ್ಲಿ ಸಮಾಜವಾದದಕ್ಕಿಂತ ಜಾತಿ ರಾಜಕಾರಣವೇ ಬಹು ಮುಖ್ಯವಾಗಿದೆ. ಒಂದರ್ಥದಲ್ಲಿ ಈ ಪಕ್ಷಗಳು ಜಾತಿ ರಾಜಕಾರಣದ ಭದ್ರ ಕೋಟೆಗಳಾಗಿವೆ. ಜಾತಿ ರಾಜಕಾರಣದಿಂದ ನಿರ್ದಿಷ್ಟ ಹಿಂದುಳಿದ ಜಾತಿಗಳಿಗೆ ಸಹಾಯವಾದರೂ ಕೂಡ ಈ ಪಕ್ಷಗಳು ಸಮಾಜವಾದವನ್ನು ಮರೆತು ಜಾತಿ ರಾಜಕಾರಣಕ್ಕೆ ಹೆಚ್ಚಿನ ಪ್ರಾಶಸ್ತ್ಯ ಕೊಡುತ್ತಿವೆ. ಈ ಬೆಳವಣಿಗೆ ದೇಶದಲ್ಲಿರುವ ಎಲ್ಲ ಹಿಂದುಳಿದ ಮತ್ತು ತುಳಿತಕ್ಕೊಳಪಟ್ಟ ಸಮುದಾಯಗಳ ಸಮಗ್ರ ಅಭ್ಯುದಯಕ್ಕೆ ಅಡೆತಡೆಯಾಗಿದೆ. ಇಂತಹ ಜಾತಿ ರಾಜಕಾರಣದ ಶಕ್ತಿಗಳ ಜೊತೆ ರಾಜಕೀಯ ಮೈತ್ರಿ ಮಾಡುವಾಗ ಸಮಾಜವಾದದಲ್ಲಿ ನಿಜವಾಗಿಯೂ ನಂಬಿಕೆ ಇಟ್ಟುಕೊಂಡಿರುವ ಪಕ್ಷ ಬಹಳ ಆಲೋಚಿಸಬೇಕು. ಇಲ್ಲವಾದರೆ, ಸಮಾಜವಾದ ಬದಿಗುಳಿದು ಕೇವಲ ಅಧಿಕಾರ ಮಾತ್ರ ಮುಖ್ಯವಾಗುವದರಲ್ಲಿ ಯಾವ ಸಂದೇಹವೂ ಇಲ್ಲ.

ಇನ್ನು ಕೊನೆಯದಾಗಿ ಹೇಳುವದಾದರೆ, ಸಂಯುಕ್ತ ಅಥವಾ ಒಗ್ಗೂಡಿದ ಹೋರಾಟಕ್ಕೆ ಭಾರತೀಯ ಕಮ್ಯುನಿಸ್ಟ್ ಪಕ್ಷವು ಸಮಯೋಚಿತ ಮತ್ತು ಸಮಂಜಸ ಕರೆ ನೀಡಿದರೂ ಅದರ ಋಣಾತ್ಮಕ ಕರೆಗೆ ಯಾವದೆ ಸ್ಪಂದನೆ ಉಳಿದ ಕಮ್ಯುನಿಸ್ಟ ಪಕ್ಷಗಳಿಂದ ಬರುತ್ತಿಲ್ಲ. ರಾಜಕೀಯ ಅಥವಾ ಸರ್ಕಾರ ರಚನಾ ಪ್ರಕಿಯೆಯಲ್ಲಿ ಮುಖ್ಯವಾಹಿನಿ ಕಮ್ಯುನಿಸ್ಟ್ ಪಕ್ಷಗಳಿಂದ ಕಂಡುಬರುವ ಸೈದ್ಧಾಂತಿಕ ಪರಿಪಕ್ವತೆ ಇನ್ನಿತರ ವಿಷಯಗಳಲ್ಲಿ ಅಂದರೆ ಸಾಮಾಜಿಕ, ರಾಜಕೀಯ ಮತ್ತು ಆರ್ಥಿಕ ಬದಲಾವಣೆಗಳಲ್ಲಿ ಇನ್ನೂ ಹೆಚ್ಚಿನದಾಗಿ ಕಾಣುತ್ತಿಲ್ಲ. ಕೆಲವು ಬಾರಿ ಮಾರ್ಕ್ಸವಾದಿ ಕಮ್ಯುನಿಸ್ಟ್ ಪಕ್ಷವು ದೊಡ್ಡಣ್ಣನಂತೆ ವರ್ತಿಸಿರುವ ಸಂಗತಿಯು ಕೂಡಾ ಒಗ್ಗಟ್ಟಿನ ಹೋರಾಟದ ಅನುಪಸ್ಥಿತಿಗೆ ಕಾರಣವಾಗಿದೆ. ಆಂತರಿಕ ಗೊಂದಲ ಮತ್ತು ದ್ವಂದ್ವಗಳನ್ನು ದೇಶದ ಎಲ್ಲ ಸಮಾಜವಾದಿ ಶಕ್ತಿಗಳು ಮರೆತು ಭವ್ಯ ಭಾರತ ಮತ್ತು ಭವ್ಯ ಮನುಕುಲ ನಿರ್ಮಾಣದಲ್ಲಿ ತಮ್ಮ ಸಕ್ರಿಯ ಪಾತ್ರವನ್ನು ನಿರಂತರವಾಗಿ ಇನ್ನು ಹೆಚ್ಚಿನ ಶಕ್ತಿಯಿಂದ ಮುಂದುವರಿಸುತ್ತವೆಯೆಂಬುದು ಜನಸಾಮಾನ್ಯನ ಆಶಯ. ●

ಇಡೀ ವಿಶ್ವದಲ್ಲಿ
ಮನುಷ್ಯನ ಶ್ರಮಕ್ಕಿಂತ
ಹಾಗೂ ಅದರ ಜೊತೆಗೆ
ಸಾಗುವ ಚಿಂತನೆಗಿಂತ
ಶಕ್ತಶಾಲಿಯಾದುದು
ಸೃಜನಸಾತ್ಮಕವಾದುದು
ಬೇರೆ ಯಾವುದು ಇಲ್ಲ.



– ಮಾಕ್ಸಿಂ ಗಾರ್ಕಿ